


## ಕರ್ನಾಟಕ ಸರ್ಕಾರ

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,

## 2021-22

# ಪರ್ಯಾಯ ಶೈಕ್ಷಣಿಕ ಯೋಜನೆ

ವಿಷಯ:- ಕನ್ನಡ

ತರಗತಿ:-3ನೇ ತರಗತಿ

ರಚನೆಗೆ ಸಹಕಾರ:- ಚಿಕ್ಕಮಗಳೂರು ಶೈಕ್ಷಣಿಕ ವಲಯ

ಪರಿಕಲ್ಪನೆ ಮತ್ತು ಮಾರ್ಗದರ್ಶನ

ಪ್ರಾಂಶುಪಾಲರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ರಾಮನಹಳ್ಳಿ, ಚಿಕ್ಕಮಗಳೂರು

# ಪರಿವಿಡಿ


| ಕ್ರಮ ಸಂಖ್ಯೆ | ಮೈಲಿಗಲ್ಲುಗಳು | ಪುಟ ಸಂಖ್ಯೆ |
|---|---|---|
| 01. | ಮೈಲಿಗಲ್ಲುಗಳು–1 ಬಾವಿಯಲ್ಲಿ ಚಂದ್ರ | 3–6 |
| 02. | ಮೈಲಿಗಲ್ಲುಗಳು–2 ಲಗೋರಿ ಆಟ | 7–10 |
| 03. | ಮೈಲಿಗಲ್ಲುಗಳು–3 ಉದ್ಯಾನ ವನದಲ್ಲಿ ಒಂದು ದಿನ | 11–14 |
| 04. | ಮೈಲಿಗಲ್ಲುಗಳು–4 ಮುದ್ದು ಕಂದ | 15–18 |
| 05. | ಮೈಲಿಗಲ್ಲುಗಳು–5 ಚಿನ್ನದ ಬೊಂಬೆಗಳು | 19–22 |
| 06. | ಮೈಲಿಗಲ್ಲುಗಳು–6 ಶಾಲಾ ಪಾಕ್ಷಿಕ ಪತ್ರಿಕೆ | 23–27 |


DIET CHIK

3ನೇ ತರಗತಿ
ಕನ್ನಡ

# ಬಾವಿಯಲ್ಲಿ ಚಂದ್ರ


**ಮೈಲಿಗಲ್ಲು–01**


**ನಿರೀಕ್ಷಿತ ಕಲಿವಿನ ಫಲಗಳು:– ಪದ್ಯವನ್ನು ಸ್ವರಭಾರಯುಕ್ತವಾಗಿ ಹಾಡುವುದು ಮತ್ತು ಅರ್ಥವನ್ನು ಗ್ರಹಿಸುವುದು.**

**ಸೂಚನೆ : ಈ ಪದ್ಯವನ್ನು ಮೈಲಿಗಲ್ಲು –01 ಮೆಟ್ಟಿಲು ಸಂಖ್ಯೆ 6 ರಲ್ಲಿ ನೋಡಿ ಅಭ್ಯಾಸ ಮಾಡುವುದು. ಮೆಟ್ಟಿಲು ಸಂಖ್ಯೆ 7, 8, 9 ನ್ನು ಗಮನಿಸುವುದು.**

**1. ಈ ಕೆಳಗಿನ ಚಿತ್ರಗಳಿಗೆ ನಿನಗೆ ಇಷ್ಟವಾದ ಬಣ್ಣ ತುಂಬು.**


ಬಾವಿ


ಚಂದ್ರ


ನಕ್ಷತ್ರ

**2. ಹೊಸ ಪದಗಳ ಅರ್ಥ ತಿಳಿ.**

| | |
|---|---|
| • ಇಣುಕು–ಬಗ್ಗಿನೋಡು<br>• ಇರುಳು–ರಾತ್ರಿ<br>• ಆಗಸ–ಆಕಾಶ | • ರಭಸ–ವೇಗ<br>• ಬಿಂಬ–ಪ್ರತಿರೂಪ<br>• ತಿಂಗಳು–ಚಂದಿರ |

**3. ಈ ಪದ್ಯದಲ್ಲಿರುವ ಪ್ರಾಸಪದಗಳನ್ನು ಗುರುತಿಸಿ ಚೌಕ ಹಾಕಿದ ಜಾಗದಲ್ಲಿ ಬರೆ.**

ಚಂದ್ರನ ಮೇಲಕೆ ಏರಿಸಿ ಬಿಟ್ಟೆ
ನಮ್ಮಯ ದೇವರ ಬದುಕಿಸಿ ಕೊಟ್ಟೆ
ಅಮ್ಮಗೆ ಗೊತ್ತಾದರೆ ನಾ ಕೆಟ್ಟೆ
ಎಂದೋಡಿದ ಪುಟ್ಟು


**4. ಕೆಳಗೆ ಇರುವ ಪದಗಳಿಗೆ ವಿರುದ್ಧ ಪದ ಬರೆ.**



ದೂರ x ☐ ಹೊರಗೆ x ☐

ರಭಸ x ☐ ಬೆಳಕು x ☐

DIET CHIKKAMAGALURU

**5. ಮಾದರಿಯಂತೆ ಚಿತ್ರಗಳನ್ನು ಗುರುತಿಸಿ ಅವುಗಳ ಹೆಸರುಗಳನ್ನು ಬರೆ:**

**ಮಾದರಿ:–**  ನಕ್ಷತ್ರ

____ ____ ____ ____

**6. ಮಾದರಿಯಂತೆ ಬಳಸಿ ವಾಕ್ಯ ರಚಿಸು:**

ಮಾದರಿ:– ಚಂದ್ರ:– ಬಾವಿಯಲ್ಲಿ ಚಂದ್ರನ ಬಿಂಬವನ್ನು ನೋಡಿದರು.

- ಬಾವಿ:– ____
- ಹಗ್ಗ:– ____
- ಅಮ್ಮ:– ____

**7. ಮಾದರಿಯಂತೆ ಚಿತ್ರದ ಸಹಾಯದಿಂದ ಬಿಟ್ಟಿರುವ ಜಾಗದಲ್ಲಿ ಸರಿಯಾದ ಪದ ತುಂಬಿ ಬರೆ:**

ಮಾದರಿ:– ಗೋಪಿ ಪುಟ್ಟು ಬಾವಿ ಗೆ ಇಣುಕಿದರು. 

- ಬಾವಿಯಲ್ಲಿ ____ ನ ಬಿಂಬ ಕಂಡಿತ್ತು. 
- ಚಂದ್ರನ ಮೇಲಕ್ಕೆ ಎತ್ತಲು ಪುಟ್ಟುವು ____ ವ ತಂದನು. 


**8. ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸಮಾನಾರ್ಥಕ ಪದಗಳನ್ನು ಬರೆ:**

**ಮಾದರಿ:– ಚಂದ್ರ, ಶಶಿ, ಚಂದಿರ**

1. ಬಿಂಬ____ ____ 2. ಆಗಸ____ ____ 3. ತುಂಡಾಗು ____ ____

**9. ಮಾದರಿಯಂತೆ ಚಿತ್ರ ನೋಡಿ ಸರಿಯಾದ ಪದಕ್ಕೆ ವೃತ್ತ ಹಾಕಿ ಆ ಪದವನ್ನು ಮುಂದೆ ಬರೆ:**

**ಮಾದರಿ:**  ಹಗ್ಗ, ಚಂದ್ರ, (ಬಾವಿ) ಬಾವಿ

-  ಪುಟ್ಟು, ಬಾವಿ, ಹಗ್ಗ ____
-  ಚಂದ್ರ, ನಕ್ಷತ್ರ, ಸೂರ್ಯ ____

DIET CHIKKAMAGALURU

**10. ಕೊಟ್ಟಿರುವ ಪದಗಳಲ್ಲಿ ಚಂದ್ರನಿಗೆ ಸಂಬಂಧಿಸಿದ ಪದಗಳಿಗೆ ನಿನಗಿಷ್ಟವಾದ ಬಣ್ಣ ತುಂಬು:**

| | | | |
|---|---|---|---|
| ಇರುಳು | ಚಂದ್ರ | ಕತ್ತಲು | ಪುಟ್ಟು |
| ಬಾವಿ | ಅಮ್ಮ | ಹಗ್ಗ | ಬೆಳದಿಂಗಳು |

**11. ವಾಕ್ಯವನ್ನು ಸರಿಪಡಿಸಿ ಬರೆಯಿರಿ:**

**ಮಾದರಿ**:– ಬೆಳಕಿನ ತಿಂಗಳ ಇರಳಿನಲಂದು – ತಿಂಗಳ ಬೆಳಕಿನ ಇರುಳಿನಲಂದು.

- ನಕ್ಷತ್ರಗಳು ಕಾಣಿಸುತ್ತವೆ ಆಗಸದಲ್ಲಿ

____________________

- ಕೆಲಸದೊಳಿರುತಿರೆ ಕಂಡು ಅಮ್ಮನು

____________________

**12. ಈ ಕೆಳಗಿನ ಪದ್ಯದ ಸಾಲುಗಳನ್ನು ಕಂಠಪಾಠ ಮಾಡಿ ಕೊಟ್ಟಿರುವ ಜಾಗದಲ್ಲಿ ಬರೆ:**

| | |
|---|---|
| **ತಿಂಗಳ ಬೆಳಕಿನ ಇರುಳಿನಲಂದು**<br><br>**ಅಮ್ಮನು ಕೆಲಸದೊಳಿರುತಿರೆ ಕಂಡು**<br><br>**ಗೋಪಿಯು ಪುಟ್ಟುವು ಹೊರಗಡೆ ಬಂದು**<br><br>**ಬಾವಿಗೆ ಇಣುಕಿದರು** | |

**13. ಈ ಕೆಳಗಿನ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸು:**

- ಪುಟ್ಟುವು ಚಂದ್ರನ ಬಿಂಬವ ಎಲ್ಲಿ ಕಂಡನು?
- ಚಂದ್ರನು ಯಾವಾಗ ಕಾಣುತ್ತಾನೆ?
- ಪುಟ್ಟುವು ಬಾವಿಯಲ್ಲಿ ಏನನ್ನು ಕಂಡನು?

**14. ಬಿಟ್ಟಿರುವ ಸಾಲುಗಳನ್ನು ಭರ್ತಿ ಮಾಡಿ ಬರೆ:**

ಚಂದ್ರನ ಮೇಲಕೆ ಎತ್ತಲಿಕೆಂದು

……………………………………

ದೂರದಿ ಗೋಪಿಯು ನಿಲ್ಲಿಸಿ ಪುಟ್ಟು.

…………………………………………

15. **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು:**

ಈ ಪದ್ಯವನ್ನು ಬರೆದವರು ಯಾರು?

____________________

DIET CHIKKAMAGALURU

ಗೋಪಿ ಪುಟ್ಟು ಯಾವಾಗ ಹೊರಗಡೆ ಬಂದರು?

---

ಚಂದ್ರನ ಮೇಲಕೆ ಯಾರು ಏರಿಸಿದರು?

---

**16. ಕೊಟ್ಟಿರುವ ವಾಕ್ಯವನ್ನು 2 ಗೆರೆಗೆ ತಾಗಿಸಿ ನಕಲು ಮಾಡಿ ಬರೆ:**

**ಮಾದರಿ:–** ~~ಗೋಪಿ ಪುಟ್ಟು ಬಾವಿಗೆ ಇಣುಕಿದರು.~~

- ಚಂದ್ರನು ಬಾವಿಗೆ ಬಿದ್ದನು ಎಂದು.

- ಆಗಸದಲ್ಲಿ ನಕ್ಷತ್ರಗಳು ಕಾಣಿಸುತ್ತವೆ.

**17. ಬಾವಿ ಮತ್ತು ಚಂದ್ರನ ಚಿತ್ರವನ್ನು ಬಿಡಿಸಿ ಬಣ್ಣವನ್ನು ತುಂಬು:**

**ಹೆಚ್ಚುವರಿ ಚಟುವಟಿಕೆಗಳು:–**

1. ಈ ಪದ್ಯವನ್ನು ನೋಡದೆ ನಿನ್ನದೆ ರಾಗದಲ್ಲಿ ಹಾಡು.
2. ಈ ಪದ್ಯವನ್ನು ಕಥೆಯ ರೂಪದಲ್ಲಿ ನಿನ್ನ ಗೆಳೆಯ/ ಗೆಳತಿಗೆ ಹೇಳು.
3. ಈ ಪದ್ಯದಂತೆ ನಿನಗೆ ಇಷ್ಟವಾದ ಬೇರೆ ಯಾವುದಾದರೂ ಪದ್ಯವನ್ನು ಹಾಡು.

3ನೇ ತರಗತಿ
ಕನ್ನಡ

# ಲಗೋರಿ ಆಟ

2ನೇ ಮೈಲಿಗಲ್ಲು

**ನಿರೀಕ್ಷಿತ ಫಲಗಳು:– ಆಟಗಳನ್ನು ಆಡುವ ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆ ಅರ್ಥ ಮಾಡಿಕೊಳ್ಳುವುದು.**

**ಸೂಚನೆ :–** ಈ ಗದ್ಯವನ್ನು ಮೈಲಿಗಲ್ಲು 2ರ ಮೆಟ್ಟಿಲು ಸಂಖ್ಯೆ 19, 20ರಲ್ಲಿ ನೋಡಿ ಅಭ್ಯಾಸ ಮಾಡುವುದು.

**1. ಈ ಕೆಳಗಿನ ಆಟಗಳಲ್ಲಿ ನಿನಗೆ ಇಷ್ಟವಾದ ಆಟಗಳಿಗೆ ಬಣ್ಣ ಹಾಕು:**

| | | | | |
|---|---|---|---|---|
| ಚೌಕಾಬಾರ | ಹಾವು ಏಣಿ | ಮರಕೋತಿ | ಚದುರಂಗ | ಕುಂಟೆಬಿಲ್ಲೆ |
| ಹಗ್ಗದಾಟ | ಜೂಟಾಟ | ಕಬ್ಬಡಿ | ಲಗೋರಿ | ಕಣ್ಣಾಮುಚ್ಚಾಲೆ |

**2. ಕೆಳಗೆ ನೀಡಿರುವ ವಾಕ್ಯಗಳನ್ನು ನಿನ್ನ ಸ್ನೇಹಿತನೊಂದಿಗೆ ಸಂಭಾಷಣೆ ನಡೆಸು:**

**ರಾಜು:** ನಿನಗೆ ಇಷ್ಟವಾದ ಆಟ ಯಾವುದು?
**ರವಿ:** ನನಗೆ ಲಗೋರಿ ಆಟ ಇಷ್ಟ.
**ರಾಜು:** ಈ ಆಟ ಆಡಲು ಎಷ್ಟು ಗುಂಪುಗಳಿರಬೇಕು?
**ರವಿ:** ಈ ಆಟ ಆಡಲು 2 ಗುಂಪುಗಳಿರಬೇಕು.

**3. ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ಬರೆ:**

**ಮಾದರಿ:– ಚರ್ಚೆ:–** ಮಕ್ಕಳು ಮೈದಾನದಲ್ಲಿ ಚರ್ಚೆ ಮಾಡುತ್ತಿದ್ದರು.

- **ಹೊರಾಂಗಣ ಆಟ:** ______________________
- **ಆಲಿಸು** ______________________

**4. ಈ ಕೆಳಗೆ ನೀಡಿರುವ ಪದಗಳಿಗೆ ಗೆರೆ ಎಳೆದು ವಿರುದ್ಧ ಪದಗಳನ್ನು ಜೋಡಿಸಿ ಮುಂದೆ ನೀಡಿರುವ ಸಾಲಿನಲ್ಲಿ ಬರೆ:**

ಕಡಿಮೆ ಕೆಳಗೆ ಒಳಾಂಗಣ ದೂರ

ಮೇಲೆ ಹೆಚ್ಚು ಹತ್ತಿರ ಹೊರಾಂಗಣ

1. ______________________
2. ______________________
3. ______________________
4. ______________________

**5. ಕೊಟ್ಟಿರುವ ವಾಕ್ಯಗಳನ್ನು ತಪ್ಪಿಲ್ಲದೆ ದುಂಡಾಗಿ ನಕಲು ಮಾಡಿ ಬರೆ:**

1. ಕಲ್ಲು ಉರುಳಿದ ತಕ್ಷಣ ಚೆಂಡು ಎಸೆದ ತಂಡದ ಸದಸ್ಯರು ಓಡಬೇಕು.

______________________

______________________

2. ಲಗೋರಿ ಆಟದಲ್ಲಿ ನಿಯಮಗಳನ್ನು ಮುಖ್ಯವಾಗಿ ಪಾಲಿಸಬೇಕು.

______________________


______________________

6. **ಕೊಟ್ಟಿರುವ ಪದಗಳ ಅರ್ಥವನ್ನು ತಿಳಿದು ಪಕ್ಕದಲ್ಲಿ ಬರೆ:**

* ತಾಳ್ಮೆ – ಸಹನೆ • ____________________
* ಆಲಿಸು – ಮನಸ್ಸಿಟ್ಟು ಕೇಳು • ____________________
* ಆತುರ – ಅವಸರ • ____________________
* ಉರುಳಿಸು – ಬೀಳಿಸು • ____________________
* ಚರ್ಚೆ – ವಾದ • ____________________

7. **ಕೊಟ್ಟಿರುವ ಪದಗಳಲ್ಲಿ ಮಾದರಿಯಂತೆ ಆರಿಸಿ ನವಿಲಿನ ಗರಿಯ ಒಳಗೆ ಬರೆ:**

**ಮಾದರಿ:–** ಪುಸ್ತಕ– ಪುಸ್ತಕಗಳು




8. **ಮಾದರಿಯಂತೆ ನೀಡಿರುವ ಚಿತ್ರಗಳನ್ನು ನೋಡಿ ಆಟಗಳ ಹೆಸರನ್ನು ಬರೆ:**





| | | |
|---|---|---|
| | ಮರಕೋತಿ ಆಟ | |

9. ಪದಗಳನ್ನು ಸರಿಪಡಿಸಿ ಮುಂದಿನ ಚೌಕದಲ್ಲಿ ಬರೆ:

ಮಾದರಿ: ರಿ. ಲ. ಗೋ. :– ಲಗೋರಿ

* ಲಿ. ಆ. ಸು. ______ * ಡಿ. ಜೋ. ಸು. ______
* ನಿ. ಮ. ಯ ______ * ಕ್ಕ. ಮ. ಳು ______

10 "ಅ" ಪಟ್ಟಿ ಪದಗಳಿಗೆ "ಬ" ಪಟ್ಟಿಯಲ್ಲಿನ ಅರ್ಥಗಳನ್ನು ಸರಿಹೊಂದಿಸಿ ಕೊಟ್ಟಿರುವ ಗೆರೆಯ ಮೇಲೆ ಬರೆ:

| ಅ | | ಬ | |
|---|---|---|---|
| * ಆಲಿಸು | – | ಅವಸರ | ______ |
| * ಆತುರ | – | ಸಹನೆ | ______ |
| * ತಾಳ್ಮೆ | – | ಮನಸ್ಸಿಟ್ಟು ಕೇಳು | ______ |

11. ಈ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸು:

- ಲಗೋರಿ ಆಟದಲ್ಲಿ ಕಲ್ಲುಗಳನ್ನು ಜೋಡಿಸಿದ ನಂತರ ಏನೆಂದು ಕೂಗಬೇಕು?
- ಲಗೋರಿ ಆಟ ಆಡಲು ಎಷ್ಟು ಗುಂಪುಗಳಿರಬೇಕು?
- ಲಗೋರಿ ಆಟ ಇದೊಂದು ಯಾವ ಆಟವಾಗಿದೆ?

12. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು:

1. ಲಗೋರಿ ಆಟ ಆಡಲು ಎಷ್ಟು ಗುಂಪುಗಳಿರಬೇಕು?

______

2. ಲಗೋರಿ ಆಟ ಆಡುವ ಮುನ್ನ ಏನನ್ನು ತಿಳಿದಿರಬೇಕು?

______

3. ಶಿಕ್ಷಕರು ಮಕ್ಕಳಿಗೆ ಯಾವ ಆಟದ ಬಗ್ಗೆ ತಿಳಿಸಿದರು?


______

4. ಲಗೋರಿ ಆಟದಲ್ಲಿ ಗೆರೆಗಳನ್ನು ಹೇಗೆ ಎಳೆಯಬೇಕು?

______

DIET CHIKKAMAGALURU

13. ನೀಡಿರುವ ಸಂಖ್ಯೆಗೆ ಅನುಗುಣವಾಗಿ ಗೆರೆ ಎಳೆದು ಹೊಂದಿಸಿ ಆ ಚಿತ್ರದ ಹೆಸರನ್ನು ಬರೆ:




15. ಒಗಟು ಬಿಡಿಸಿ ಉತ್ತರ ಬರೆ:

ನೀರಿನಲ್ಲಿ ನನ್ನ ವಾಸ
ನನ್ನ ಬೆನ್ನು ಬಹಳ ಗಟ್ಟಿ
ನಡಿಗೆ ಮಾತ್ರ ನಿಧಾನ
ನಾನು ಯಾರು ಗೊತ್ತೇ?

ಸೋಗೆ ಗರಿ; ಸೊಗಸು ನಾಟ್ಯ
ರಂಗು ರಂಗು; ನೂರು ಕಣ್ಣು
ನಾನು ಯಾರು ಗೊತ್ತೇ?

**ಹೆಚ್ಚಿನ ಚಟುವಟಿಕೆ:**

1. ನಿನಗೆ ಇಷ್ಟವಾದ ಆಟದ ಬಗ್ಗೆ ನಿನ್ನ ಗೆಳೆಯ/ ಗೆಳತಿಗೆ ಹೇಳು.
2. ನಿನ್ನ ಸ್ನೇಹಿತರೊಂದಿಗೆ ಲಗೋರಿ ಆಟವನ್ನು ನಿಯಮ ಪಾಲಿಸಿ

DIET CHIKKAMAGALURU

3ನೇ ತರಗತಿ

ಕನ್ನಡ

# ಉದ್ಯಾನ ವನದಲ್ಲಿ ಒಂದು ದಿನ

ಮೈಲಿಗಲ್ಲು-03

**ನಿರೀಕ್ಷಿತ ಫಲಗಳು:-** ಸೂಚನಾ ಫಲಕದಲ್ಲಿನ ಸರಳ ಸೂಚನೆಗಳನ್ನು ಓದುವುದು ಹಾಗೂ ಭಿತ್ತಿಪತ್ರಗಳನ್ನು ಅರ್ಥೈಸಿಕೊಳ್ಳುವುದು. ಮೌಖಿಕ ಸೂಚನೆ ಅರ್ಥ ಮಾಡಿಕೊಳ್ಳುವುದು.

**ಸೂಚನೆ:- ಪಠ್ಯಭಾಗದ ಮೈಲಿಗಲ್ಲು 3ರ ಮೆಟ್ಟಿಲು ಸಂಖ್ಯೆ 33ನ್ನು ನೋಡಿ ಅಭ್ಯಾಸ ಮಾಡುವುದು.**

## 1. ಸೂಚನೆಗಳನ್ನು ಓದಿರಿ ಮತ್ತು ಪಾಲಿಸಿರಿ:

- ಒಂದು ಚಪ್ಪಾಳೆ ತಟ್ಟು.
- ಎರಡೂ ಕೈಗಳನ್ನು ತಲೆ ಮೇಲೆ ಇಡು.
- ಒಂಟಿ ಕಾಲಿನಲ್ಲಿ ನಿಲ್ಲು.
- ಎರಡೂ ಕೈಗಳಿಂದ ನಮಸ್ಕಾರ ಮಾಡು.
- ನಿನ್ನ ಎಡಕ್ಕೆ ಒಂದು ಹೆಜ್ಜೆ ಇಟ್ಟು, ಸೊಂಟದ ಮೇಲೆ ಕೈ ಇಡು

## 2. ಕೆಳಗೆ ನೀಡಿರುವ ಪದ ಮತ್ತು ವಾಕ್ಯಗಳನ್ನು ಅರ್ಥಮಾಡಿಕೊಂಡು ಓದು:

| ಓದಿ ತಿಳಿ | ಓದಿ ಬರೆ |
|---|---|
| * ಇಕ್ಕೆಲ- ಎರಡೂ ಕಡೆ | ಅಶೋಕ ಮಹಾರಾಜನು ರಸ್ತೆಯ **ಇಕ್ಕೆಲ**ಗಳಲ್ಲಿ ಗಿಡಗಳನ್ನು ನೆಡೆಸಿದನು. |
| * ಲಕ್ಷ್ಯ-ಗಮನ | ಹಿರಿಯರು ಹೇಳುವ ಒಳ್ಳೆಯ ಮಾತುಗಳನ್ನು **ಲಕ್ಷ್ಯ** ಕೊಟ್ಟು ಕೇಳಬೇಕು |
| * ಫಲಕ-ಹಲಗೆ | ನಮ್ಮ ಶಾಲೆಯ ಹೆಸರನ್ನು ಒಳಗೊಂಡ ಶಾಲಾ **ಫಲಕವು** ತುಂಬಾ ಸುಂದರವಾಗಿದೆ. |
| * ಪರಿಮಳ-ಸುಗಂಧ, ಸುವಾಸನೆ | ಮಲ್ಲಿಗೆಯ **ಪರಿಮಳ** ತುಂಬಾ ಚೆನ್ನಾಗಿರುತ್ತದೆ. |
| * ಕಾರಂಜಿ-ಚಿಲುವೆ | ಉದ್ಯಾನವನಗಳನ್ನು ನೀರಿನ **ಕಾರಂಜಿ**ಯನ್ನು ನಿರ್ಮಿಸಿರುತ್ತಾರೆ. |
| * ಪೋಲು-ಹಾಳು, ಅಪವ್ಯಯ | ನಾವು ಸಮಯವನ್ನು **ಪೋಲು** ಮಾಡಬಾರದು. |
| * ಅಮೂಲ್ಯ- ಬೆಲೆ ಕಟ್ಟಲಾಗದ | ವಿದ್ಯೆ **ಅಮೂಲ್ಯ**ವಾದ ಸಂಪತ್ತು |
| * ಪಾದಚಾರಿ-ಕಾಲು ನಡಿಗೆಯಿಂದ ಸಾಗುವವನು | **ಪಾದಚಾರಿ**ಗಳು ರಸ್ತೆಯನ್ನು ಝೀಬ್ರಾ ಪಟ್ಟಿಯ ಮೂಲಕವೇ ದಾಟಬೇಕು. |

## 3. ಈ ಕೆಳಗಿನ ಸೂಚನೆಗಳನ್ನು ಗಟ್ಟಿಯಾಗಿ ಓದಿ ಬರೆ:

- ಮರಗಳನ್ನು ಕಡಿಯಬೇಡಿ. ______________________
- ಪಾದರಕ್ಷೆ ಬಿಡುವ ಜಾಗ. ______________________
- ಪ್ರಾಣಿಗಳಿಗೆ ತೊಂದರೆ ಕೊಡಬೇಡಿ. ______________________
- ಸಾಲಾಗಿ ಬನ್ನಿ. ______________________

4. ಈ ಕೆಳಗಿನ ಅಕ್ಷರಗಳನ್ನು ಸರಿಯಾದ ರೂಪದಲ್ಲಿ ಜೋಡಿಸಿ ಪದ ರಚಿಸಿ ಬರೆ:

| | | | |
|---|---|---|---|
| ತ್ರಿ | ಪ | ಭಿ | ತ್ರ |
| ಚಾ | ಪಾ | ರಿ | ದ |
| ಳ | ದಾ | ವಾ | ಸ |

5. ಈ ಕೆಳಗಿನ ಭಿತ್ತಿಪತ್ರಗಳನ್ನು ಓದು, ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು:

**ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ.**




**10 ಫೆಬ್ರವರಿ 2020**

ನೆನಪಿಡಿ:– **1–19 ವರ್ಷ ವಯಸ್ಸಿನ ಎಲ್ಲಾ ಮಕ್ಕಳನ್ನು ಹತ್ತಿರದ ಶಾಲೆ ಅಥವಾ ಅಂಗನವಾಡಿ ಕೇಂದ್ರಕ್ಕೆ ಕಳುಹಿಸಬೇಕು. ಇಲ್ಲಿ ಸುರಕ್ಷಿತ ಹಾಗೂ ಪ್ರಯೋಜನಕಾರಿಯಾದ ಜಂತುಹುಳು ನಾಶಕ ಮಾತ್ರೆಗಳನ್ನು ಉಚಿತವಾಗಿ ನೀಡಲಾಗುತ್ತದೆ.**

1. ಯಾವ ದಿನಾಂಕದಂದು ಜಂತುಹುಳು ನಾಶಕ ಮಾತ್ರೆಯನ್ನು ನೀಡಲಾಗುತ್ತದೆ?
2. ಜಂತುಹುಳು ನಾಶಕ ಮಾತ್ರೆಯನ್ನು ಉಚಿತವಾಗಿ ಎಲ್ಲೆಲ್ಲಿ ನೀಡಲಾಗುತ್ತದೆ?
3. ಜಂತುಹುಳು ನಾಶಕ ಮಾತ್ರೆಯನ್ನು ಯಾವ ವಯಸ್ಸಿನ ಮಕ್ಕಳಿಗೆ ನೀಡಲಾಗುತ್ತದೆ?

6. ಕೆಳಗಿನ ಪದಗಳನ್ನು ಓದಿ ಮಾದರಿಯಂತೆ ಒತ್ತಕ್ಷರವನ್ನು ಹೊಂದಿರುವ ಪದಕ್ಕೆ ಬಣ್ಣ ಹಾಕು:

ಮಾದರಿ:–

| | | | | |
|---|---|---|---|---|
| ಪ್ರ | ಚಾ | ರ | ಪ | ತ್ರ |

* 

| | | |
|---|---|---|
| ಅ | ಮೂ | ಲ್ಯ |

* 

| | | |
|---|---|---|
| ಇ | ಕ್ಕೆ | ಲ |

* 

| | | |
|---|---|---|
| ಕ | ಣ್ಣ | ನ |

* 

| | | |
|---|---|---|
| ಮ | ಕ್ಕ | ಳು |

7. ಈ ಕೆಳಗಿನ ಸಾಲುಗಳನ್ನು ಓದುತ್ತಾ, ಬರೆ:

ನೀರು ಅಮೂಲ್ಯವಾದದ್ದು ಮಿತವಾಗಿ ಬಳಸಿ.

______________________________

______________________________

ಇದು ಶಾಲಾವಲಯ ನಿಧಾನವಾಗಿ ಚಲಿಸಿ.

______________________________

______________________________

ಕಸವನ್ನು ಕಸದ ತೊಟ್ಟಿಯಲ್ಲಿಯೇ ಹಾಕಿ.

______________________________

______________________________

8. ಈ ಕೆಳಗಿನ ಚಿತ್ರದಲ್ಲಿ ಕಂಡುಬರುವ ಸೂಚನೆಗಳನ್ನು ಮಾದರಿಯಂತೆ ಪಟ್ಟಿ ಮಾಡು:

**ಮಾದರಿ: ಪಾದರಕ್ಷೆ ಬಿಡುವ ಜಾಗ**




| |
|---|
| |
| |
| |
| |
| |

9. ಈ ಕೆಳಗಿನ ಪದಗಳನ್ನು ಹೊಂದಿಸಿ ಪಕ್ಕದ ಜಾಗದಲ್ಲಿ ಬರೆ:

| | ಅ ಪಟ್ಟಿ | ಬ ಪಟ್ಟಿ | |
|---|---|---|---|
| 1 | ಶಾಲೆ | ಪಾದಚಾರಿ | 1. ಶಾಲೆ – ಪ್ರಾರ್ಥನೆ |
| 2 | ಆಸ್ಪತ್ರೆ | ನೀರಿನ ಕಾರಂಜಿ | 2. ________ |
| 3 | ಉದ್ಯಾನವನ | ಲಸಿಕೆ | 3. ________ |
| 4 | ರಸ್ತೆ | ಪ್ರಾರ್ಥನೆ | 4. ________ |

10. ಆವರಣದಲ್ಲಿರುವ ಸೂಕ್ತ ಪದಗಳನ್ನು ಆರಿಸಿ ಬಿಟ್ಟ ಸ್ಥಳವನ್ನು ಭರ್ತಿ ಮಾಡು:

**(ಬಾತುಕೋಳಿಗಳು, ಪೋಲು, ಭಿತ್ತಿಪತ್ರಗಳು, ಅಮೂಲ್ಯ)**

- ಗೋಡೆಗೆ ಅಂಟಿಸುವ ಪ್ರಚಾರ ಪತ್ರಗಳೇ ____________.
- ನೀರನ್ನು ---------- ಮಾಡಬೇಡಿ.
- ಕೊಳದಲ್ಲಿ __________ ಸ್ವಚ್ಛಂದವಾಗಿ ವಿಹರಿಸುತ್ತವೆ.
- ನೀರು ______ ವಾದದ್ದು, ಮಿತವಾಗಿ ಬಳಸಿ.

11. ಈ ಕೆಳಗಿನ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ವಾಕ್ಯ ರಚಿಸು:

- ನಿಯಮಗಳನ್ನು / ಸಂಚಾರಿ / ಪಾಲಿಸಿರಿ.
- ಸ್ವಚ್ಛವಾಗಿಡಿ / ಶಾಲಾ / ಪರಿಸರವನ್ನು.

DIET CHIKKAMAGALURU

### 12. ಗುಂಪಿಗೆ ಸೇರದ ಪದಕ್ಕೆ ಹಳದಿ ಬಣ್ಣ ಹಾಕು:

| | | | |
|---|---|---|---|
| ನೀರು | ಜಲ | ನೆಲ | ಉದಕ |
| ಭೂಮಿ | ಇಳೆ | ಧರೆ | ಸೂರ್ಯ |
| ಸುಗಂಧ | ಗಮನ | ಪರಿಮಳ | ಸುವಾಸನೆ |

### 13. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು:

- ಭಿತ್ತಿ ಪತ್ರ ಎಂದರೇನು?

  ________________________________________

- ಮಕ್ಕಳು ಕೊಳದ ಬಳಿ ನೋಡಿದ ಫಲಕ ಯಾವುದು?

  ________________________________________


- ನೀರನ್ನು ಏಕೆ ಪೋಲು ಮಾಡಬಾರದು?

  ________________________________________

### 14. ಮಾದರಿಯಂತೆ ವಿರುದ್ಧಾರ್ಥಕ ಪದಗಳನ್ನು ಆರಿಸಿ ಬರೆ:

**ಮಾದರಿ:–** ಒಳಗೆ X ಹೊರಗೆ

- ಮುಂದೆ X ____________
- ಸರಿ X ____________
- ಶಿಸ್ತು X ____________
- ಮೇಲೆ X ____________




**ಹೆಚ್ಚುವರಿ ಚಟುವಟಿಕೆ:–**

1. ಪಠ್ಯಭಾಗವನ್ನು ಸ್ಪಷ್ಟವಾಗಿ ಗಟ್ಟಿಯಾಗಿ ಮನೆಯಲ್ಲಿರುವ ಹಿರಿಯರ ಮುಂದೆ ಓದು.
2. ಸಂಚಾರಿ ನಿಯಮಗಳನ್ನು ಒಳಗೊಂಡಿರುವ ಚಿತ್ರ ಬರೆದು ಬಣ್ಣ ತುಂಬು.

DIET CHIKKAMAGALURU

3ನೇ ತರಗತಿ
ಕನ್ನಡ

## ಮುದ್ದು ಕಂದ

4ನೇ ಮೈಲಿಗಲ್ಲು

**ನಿರೀಕ್ಷಿತ ಫಲಗಳು:–** ಅಕ್ಷರಗಳನ್ನು ಮತ್ತು ಪದಗಳನ್ನು ಸರಿಯಾದ ವಿನ್ಯಾಸ ಅನುಕ್ರಮಣಿಕೆ ಹಾಗೂ ಸೂಕ್ತ ಅಂತರದೊಂದಿಗೆ ಬರೆಯುವುದು.

**ಸೂಚನೆ:–** ಈ ಪದ್ಯವನ್ನು ಮೈಲಿಗಲ್ಲು 4ರ ಮೆಟ್ಟಿಲು ಸಂಖ್ಯೆ 48 ರಲ್ಲಿ ನೋಡಿ ಅಭ್ಯಾಸ ಮಾಡುವುದು.

**1. ಮಾದರಿಯಂತೆ ಮೊದಲು ಪ್ರಾರಂಭವಾಗುವ ಅಕ್ಷರಗಳಿಂದಾದ 05 ಪದಗಳನ್ನು ಬರೆ:**

ಮಾದರಿ: **ಕ ⟶ 1. ಕನಕ 2. ಕಸ್ತೂರಿ 3. ಕರ್ನಾಟಕ 4. ಕರುಳು 5. ಕನಸು**

* ಜ ⟶ ________ ________ ________ ________ ________
* ಟ ⟶ ________ ________ ________ ________ ________
* ಈ ⟶ ________ ________ ________ ________ ________
* ಧ ⟶ ________ ________ ________ ________ ________
* ವ ⟶ ________ ________ ________ ________ ________

**2. ಈ ಕೆಳಗಿನ ಪದಗಳನ್ನು ಮತ್ತು ವಾಕ್ಯಗಳನ್ನು ಓದಿ ಬರೆ:**

| ಓದಿ ತಿಳಿ | ಓದಿ ಬರೆ |
|---|---|
| ಹಳ್ಳ–ತೊರೆ, ಹೊಳೆ | ನಮ್ಮೂರ **ಹಳ್ಳ**ಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. |
| ಚಂದ–ಸೊಗಸು | ನವಿಲಿನ ನರ್ತನ ನೋಡಲು **ಚಂದ** |
| ಬಳಗ–ಕುಟುಂಬ, ಪರಿವಾರ | ನಮ್ಮೂರ ಜಾತ್ರೆಗೆ ನಮ್ಮ **ಬಳಗ**ದವರೆಲ್ಲಾ ಮನೆಗೆ ಬರುತ್ತಾರೆ. |
| ಸಪ್ಪಳ– ಶಬ್ದ, ಸದ್ದು | ಕಾಡಿನಲ್ಲಿ ಒಣಗಿದ ಎಲೆಗಳ ಮೇಲೆ ನಡೆಯುವಾಗ ಪರಪರ ಎಂದು **ಸಪ್ಪಳ** ಉಂಟಾಗುತ್ತದೆ |
| ತಲಿಬ್ಯಾನಿ–ತಲೆನೋವು | ಮಳೆಯಲ್ಲಿ ನೆನೆದರೆ ನನಗೆ **ತಲಿಬ್ಯಾನಿ** ಬರುತ್ತದೆ. |
| ಮಿಡಿ–ಹೀಚುಕಾಯಿ, ಎಳಗಾಯಿ | **ಮಿಡಿ** ಮಾವಿನಕಾಯಿಯ ಉಪ್ಪಿನಕಾಯಿ ತುಂಬಾ ರುಚಿಯಾಗಿರುತ್ತದೆ. |
| ಹೊನ್ನು–ಚಿನ್ನ, ಬಂಗಾರ | **ಹೊನ್ನು** ಬೆಲೆ ಬಾಳುವ ವಸ್ತು ಆಗಿದೆ. |
| ಗುಜ್ಜಿ – ಕುಳ್ಳ, ಕುಬ್ಜ, ಪುಟ್ಟ | ನನ್ನ ತಮ್ಮ **ಗುಜ್ಜಿ**ಯಾಗಿದ್ದಾನೆ. |
| ಬೆದರು – ಹೆದರು, ಗಾಬರಿ | ನಾನು ಮೃಗಾಲಯದಲ್ಲಿ ಸಿಂಹವನ್ನು ಕಂಡು **ಬೆದರಿದೆನು**. |

**3. ಈ ಕೆಳಗಿನ ವಾಕ್ಯಗಳನ್ನು ಓದಿ ನೀಡಿರುವ ಗೆರೆಗಳಲ್ಲಿ ಬರೆ:**

- **ಹಸರಂಗಿ:–** ಹಸಿರು ಬಣ್ಣದ ಅಂಗಿ

- **ಬೆಳ್ಳಕ್ಕಿ:–** ಒಂದು ಜಾತಿಯ ಬಿಳಿಯ ಹಕ್ಕಿ

- **ಹಾಲ್ಗಡಗ:–** ಪಂಚಲೋಹದಿಂದ ತಯಾರಿಸಿದ ಕಡಗ

* **ನಿಬ್ಬಣ:–** ಮದುವೆಯ ಮೆರವಣಿಗೆ (ದಿಬ್ಬಣ)

* **ಜನಪದಗೀತೆ:–** ಜನರು ತಮ್ಮ ಅನುಭವಗಳಿಂದ ರಚಿಸಿರುವ ಹಾಡು.

**4. ಮಾದರಿಯಂತೆ ಕೊಟ್ಟಿರುವ ಪದಗಳಲ್ಲಿ ಸರಿಯಾದ ರೂಪವನ್ನು ಆಯ್ದು ಖಾಲಿ ಜಾಗದಲ್ಲಿ ಬರೆ:**

ಮಾದರಿ:– * ಹಾರ್‍ಯಾಡಿ — ಆರ್‍ಯಾಡಿ → ಹಾರ್‍ಯಾಡಿ

* ಹಣ್ಣುಳ್ಳ — ಅಣ್ಣುಳ್ಳ → ______
* ಅಳ್ಳ — ಹಳ್ಳ → ______
* ಅಸರಂಗಿ — ಹಸರಂಗಿ → ______
* ಅಳುತ್ತಿತ್ತು — ಹಳುತ್ತಿತ್ತು → ______
* ಹಳ್ಳಕ್ಕ — ಅಳ್ಳಕ್ಕ → ______

**5. ಕೆಳಗೆ ನೀಡಿರುವ ಬದಲಾದ ಅಕ್ಷರಗಳಿಂದ ಅರ್ಥಪೂರ್ಣ ಪದ ರಚಿಸಿ ಕೆಳಗಿನ ವೃತ್ತಗಳಲ್ಲಿ ಬರೆ:**

* ಕಂ ವ್ವ ದ
* ದಿ ಚಂ ರ
* ಬ್ಬ ಣ ನಿ
* ನ್ನು ಹೊ

**6. ಚಿತ್ರಕ್ಕೆ ಸಂಬಂಧಿಸಿದ ಅರ್ಥಪೂರ್ಣ ವಾಕ್ಯವನ್ನು ಸೂಕ್ತ ಅಂತರದೊಂದಿಗೆ ಅಂದವಾಗಿ ಬರೆ:**



7. ಈ ಪದಗಳಿಗೆ ಸುಳಿವು ಪೆಟ್ಟಿಗೆಯಲ್ಲಿರುವ ಅರ್ಥವನ್ನು ಆರಿಸಿ ಬರೆ:

ಮಾದರಿ:– ಚಂದ– ಸೊಗಸು

| | |
|---|---|
| ತಲೆಬ್ಯಾನಿ | – |
| ಬಳಗ | – |
| ಗುಜ್ಜಿ | – |
| ಮಿಡಿಗಾಯಿ | – |

14.

ಸೊಗಸು, ಪುಟ್ಟ, ಬಂಗಾರ, ಕುಟುಂಬ, ತಲೆನೋವು

8. ಏಣಿಯ ಮನೆಗಳಲ್ಲಿರುವ ಪದಗಳನ್ನು ಮತ್ತು ಸಂಖ್ಯೆಗಳನ್ನು ಓದು ನಂತರ ನೀಡಲಾದ ಮಾದರಿಯಂತೆ ಗಾದೆಗಳನ್ನು ರಚಿಸು:

21. ಹಾಸಿಗೆ ಇದ್ದಷ್ಟು
22. ಓದು ಒಕ್ಕಾಲು
23. ತಾಯಿಗಿಂತ ಬಂಧುವಿಲ್ಲ
24. ಸುಳ್ಳಿಗೆ ಸುಖವಿಲ್ಲ
25. ನೀರು ಕುಡಿಯಲೇ ಬೇಕು
26. ಉಪ್ಪಿಗಿಂತ ರುಚಿಯಿಲ್ಲ
27. ಕಾಲು ಚಾಚು
28. ಉಪ್ಪು ತಿಂದವರು
29. ಇಲಿಗೆ ಪ್ರಾಣ ಸಂಕಟ
30. ಆಳಾಗಿ ದುಡಿ
31. ಬುದ್ಧಿ ಮುಕ್ಕಾಲು
32. ಬೆಕ್ಕಿಗೆ ಆಟ
33. ಸತ್ಯಕ್ಕೆ ಸಾವಿಲ್ಲ
34. ಅರಸನಾಗಿ ಉಣ್ಣು

| | | |
|---|---|---|
| ಮಾದರಿ | 33. 24 | ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ |
| 01. | 21. 27 | – |
| 02. | 22. 31 | – |
| 03. | 26. 23 | – |
| 04. | 28. 25 | – |
| 05. | 32. 29 | – |
| 06. | 30. 34 | – |

9. ಮಾದರಿಯಂತೆ ಕೊಟ್ಟಿರುವ ಪದಗಳಿಗೆ ವಾಕ್ಯ ರಚಿಸಿ ಅಂದವಾಗಿ ಬರೆ:

ಮಾದರಿ:– ಚಂದ:– ಹಕ್ಕಿಗಳ ಕಲರವ ಕೇಳಲು ಬಲು ಚಂದ

- ಸಪ್ಪಳ :– ______________________
- ಗುಜ್ಜಿ :– ______________________
- ಬೆದರು :– ______________________
- ಹಳ್ಳ :– ______________________

**10. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸು:**

ಹಾವಿನ ಹೆಡಿ ಚಂದ! ______________________

ಹಾರ್‍ಯಾಡಿ ಬರುವ ______________________

ನೀ ಇದ್ದರೆ ______________________

______________________ ಹೊನ್ನ ತಾವರಿ ಮುದ್ದು!

______________________ ಮುದ್ದು! ಕಂದವ್ವ!!

______________________ ನನ್ನ ಬಳಗಾಕ!!

**11. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು:**

- ಮನೆಗೆ ಯಾರು ಚಂದ?

  ______________________________________________

- ತಾಯಿ ಮಗುವಿಗೆ ಎಂತಹ ಕಡಗ ಹಾಕಿದ್ದಾಳೆ?

  ______________________________________________

- ತಾಯಿ ಕಂದನನ್ನು ಎಲ್ಲಿಗೆ ಬರಬೇಡ ಎಂದು ಹೇಳಿದ್ದಾಳೆ?

  ______________________________________________

- ಮುದ್ದು ಕಂದ ಪದ್ಯದಲ್ಲಿ ನಿನಗೆ ಇಷ್ಟವಾದ 3 ಸಾಲುಗಳನ್ನು ಬರೆ.

  ______________________________________________


  ______________________________________________

  ______________________________________________

**12. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದಗಳಿಂದ ತುಂಬು:**

1. ಹಾರ್‍ಯಾಡಿ ಬರುವ____________ಚಂದ
2. ಹಸರಂಗಿ ತೊಡಸೀನ__________ಇಡಸೀನ
3. ಕಂದಯ್ಯನ__________ಸಪ್ಪಳ ಕೇಳಿ ನಿಬ್ಬಣದೆತ್ತುಗಳು ಬೆದರಿದವು.

**13. ಒಂದೇ ರೀತಿಯ ಚಿತ್ರಗಳಲ್ಲಿರುವ ಅಕ್ಷರಗಳನ್ನು ಗುರುತಿಸಿಕೊಂಡು ಮಾದರಿಯಂತೆ ಪದಗಳನ್ನು ಬರೆ:**




**ಮಾದರಿ:** ಕೃಷಿಕ

1. ____________ 2. ____________ 3. ____________

4. ____________ 5. ____________

**ಹೆಚ್ಚುವರಿ ಚಟುವಟಿಕೆ:–**

1. ನೀನು ಕೇಳಿದ /ಓದಿದ ಯಾವುದಾದರೂ ಒಂದು ಜಾನಪದ ಗೀತೆಯನ್ನು ಬರೆಯಿರಿ. (ಹಿರಿಯರ ಸಹಾಯಪಡಿಯಿರಿ)
2. ಪದ್ಯವನ್ನು ಸ್ಪಷ್ಟವಾಗಿ ಓದಿ. 3. ಎಲ್ಲಾ ಪದಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ.
4. ಸ್ವಂತರಾಗದಲ್ಲಿ ಹಾಡಲು ಪ್ರಯತ್ನಿಸಿ. 5. ಹಿರಿಯರು ಹೇಳಿದ 10 ಪದಗಳಿಗೆ ಉಕ್ತಲೇಖನ ಬರೆ.



DIET CHIKKAMAGALURU

3ನೇ ತರಗತಿ
ಕನ್ನಡ

## ಚಿನ್ನದ ಬೊಂಬೆಗಳು

5ನೇ ಮೈಲಿಗಲ್ಲು

**ನಿರೀಕ್ಷಿತ ಫಲಗಳು:-** ಪರಿಚಿತ ಸನ್ನಿವೇಶದಲ್ಲಿನ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.

**ಸೂಚನೆ :-** ಈ ಪಠ್ಯವನ್ನು ಮೈಲಿಗಲ್ಲು 5ರ ಮೆಟ್ಟಿಲು ಸಂಖ್ಯೆ 64 ರಲ್ಲಿ ನೋಡಿ ಅಭ್ಯಾಸ ಮಾಡುವುದು.

### 1. ಈ ಕೆಳಗಿನ ಪದಗಳನ್ನು ಓದಿ ತಿಳಿ.

**ಹೊಸ ಪದಗಳ ಅರ್ಥ**

- ಸನ್ಮಾನ – ಗೌರವ
- ದುರಾಸೆ – ಅತಿ ಆಸೆ
- ಸ್ವಾರಸ್ಯಕರ– ಕುತೂಹಲ
- ವೈಶಿಷ್ಟ್ಯ – ವಿಶೇಷ
- ವಿದ್ವತ್ತು – ಪಾಂಡಿತ್ಯ
- ಜ್ಞಾನ – ತಿಳುವಳಿಕೆ

### 2. ಮಾದರಿಯಂತೆ ವಾಕ್ಯ ರಚಿಸು:

**ಸ್ವಾರಸ್ಯಕರ** – ಬೊಂಬೆಗಳ ನೀತಿ ಸ್ವಾರಸ್ಯಕರವಾಗಿದೆ.

**ಸ್ವಾರಸ್ಯಕರ** – ______________________

**ಸನ್ಮಾನ** – ಬೊಂಬೆ ತಯಾರಕ ಸನ್ಮಾನ ಸ್ವೀಕರಿಸಲು ಒಪ್ಪಲಿಲ್ಲ.

**ಸನ್ಮಾನ** – ______________________

**ದುರಾಸೆ** – ಬೊಂಬೆ ತಯಾರಕನು **ದುರಾಸೆ** ತೋರಲಿಲ್ಲ.

**ದುರಾಸೆ** – ______________________

### 3. ಈ ಕೆಳಗಿನ ವಾಕ್ಯಗಳನ್ನು ಓದುತ್ತಾ ದುಂಡಾಗಿ ಬರೆ:

* ಕಾಳಿದಾಸ:– ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದೆ ಇದ್ದ ಪ್ರಸಿದ್ಧ ಸಂಸ್ಕೃತ ನಾಟಕಕಾರ.

______________________

______________________

* ಕಾಸು:– ಹಿಂದಿನ ಕಾಲದಲ್ಲಿದ್ದ ತಾಮ್ರದ ನಾಣ್ಯ.

______________________

* ವರಹ:– ವರಹ ಮುದ್ರೆಯಿಂದ ಕೂಡಿದ ಒಂದು ನಾಣ್ಯ.

* ಶಿಲ್ಪಿ:– ಲೋಹ, ಶಿಲೆ, ಮರಗಳನ್ನು ಮೂರ್ತಿ ರೂಪದಲ್ಲಿ ಕೆತ್ತುವ ಕಲಾವಿದ.

* ನವರತ್ನ:– ವಜ್ರ, ವೈಡೂರ್ಯ ಮಾಣಿಕ್ಯ, ಮರಕತ, ಪುಷ್ಪರಾಗ, ನೀಲ, ಗೋಮೇಧಿ, ಮುತ್ತು ಹಾಗೂ ಹವಳ ಇವುಗಳೇ ಒಂಭತ್ತು ಬಗೆಯ ರತ್ನಗಳು.

4. ಅಡಿಗೆರೆ ಎಳೆದ ಪದಗಳನ್ನು ಗಮನಿಸಿ ವಾಕ್ಯವನ್ನು ಓದಿ ಬರೆ:

- ಅವನು ಶಾಲೆಗೆ ಹೋದನು.
- ಅವಳು ಊರಿಗೆ ಹೋದಳು.
- ಅವರು ಸಂತೆಗೆ ಹೋದರು.

5. ಕೆಳಗಿನ ಪ್ರತಿಯೊಂದು ಅಕ್ಷರಗಳಿಂದ ಪ್ರಾರಂಭವಾಗುವ ಎರಡೆರಡು ಪದಗಳನ್ನು ಬರೆ:

ದಿ — ಗು
ಸೋ — ರೈ
ಕೃ — ಪ್ರ

6. ಮಾದರಿಯಂತೆ ವಾಕ್ಯ ರಚಿಸಿ ಬರೆ:

ಮಾದರಿ:– ರಮೇಶ ಪುಸ್ತಕಗಳನ್ನು ಕೊಟ್ಟನು.

| | | |
|---|---|---|
| ರಮೇಶ | | ತಂದಳು |
| ದೀಪಿಕ | ಪುಸ್ತಕಗಳನ್ನು | ನೀಡಿದರು |
| ಅಕ್ಕಂದಿರು | ಗೋಲಿಗಳನ್ನು | ಕೊಟ್ಟನು |

7. ಪದಗಳಿಗೆ ಅರ್ಥಗಳನ್ನು ಗೆರೆ ಎಳೆದು ಹೊದಿಸಿ ಕೊಟ್ಟಿರುವ ಜಾಗದಲ್ಲಿ ಬರೆ:

* ವೈಶಿಷ್ಟ್ಯ – ಪಾಂಡಿತ್ಯ 1
* ಜ್ಞಾನ – ವಿಶೇಷ 2
* ವಿದ್ವತ್ತು – ತಿಳುವಳಿಕೆ 3
* ಸ್ವಾರಸ್ಯಕರ – ಅತಿ ಆಸೆ 4
* ಸನ್ಮಾನ – ಕುತೂಹಲ 5
* ದುರಾಸೆ – ಗೌರವ 6

DIET CHIKKAMAGALURU

**8. ಸುಳಿವು ಕೊಡದಿಂದ ಸೂಕ್ತ ಪದಗಳನ್ನು ಆರಿಸಿ ಕೊಟ್ಟಿರುವ ನಾಣ್ಣುಡಿಯನ್ನು ಪೂರ್ಣಗೊಳಿಸು:**

- ಆಳಾಗಿ ದುಡಿ ______ ಉಣ್ಣು.
- ಕಷ್ಟ ಪಟ್ಟರೆ ______ ಉಂಟು.
- ಕೈ ಕೆಸರಾದರೆ ______ ಮೊಸರು.
- ಅತಿ ಆಸೆ ______ ಗೇಡು.
- ಮಾತು ಬೆಳ್ಳಿ ______ ಬಂಗಾರ.
- ಶಕ್ತಿಗಿಂತ ______ ಮೇಲು.

ಬಾಯಿ, ಮೌನ, ಸುಖ, ಅರಸಾಗಿ, ಯುಕ್ತಿ, ಗತಿ,

**9. ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸು:**

- ಮೂರು ಬೊಂಬೆಗಳ ವೈಶಿಷ್ಟ್ಯವನ್ನು ಹೇಳು.
- ನಿನಗೆ ಇಷ್ಟವಾದ ಬೊಂಬೆ ಯಾವುದು?
- ನಿನಗೆ ಆ ಗೊಂಬೆ ಏಕೆ ಇಷ್ಟವಾಯಿತು?

**10. ಗುಂಪಿಗೆ ಸೇರಿದ ಪದಕ್ಕೆ ಕೆಂಪು ಬಣ್ಣ ಹಾಕು:**

| | | | |
|---|---|---|---|
| ಸುರರು | ವಿದ್ವಾಂಸರು | ಪಂಡಿತರು | ಜ್ಞಾನಿಗಳು |
| ಅರಿವು | ತಿಳುವಳಿಕೆ | ಸುಖ | ಜ್ಞಾನ |
| ಕಾಪಾಡು | ರಕ್ಷಿಸು | ಉಳಿಸು | ಮುಗಿಸು |
| ಕಾಸು | ನಾಣ್ಯ | ನೋಟು | ವರಹ |

**11. ಈ ಪ್ರಶ್ನೆಗಳಿಗೆ ಉತ್ತರ ಬರೆ:**

- ಬೊಂಬೆ ತಯಾಕರನು ಎಷ್ಟು ಬೊಂಬೆಗಳನ್ನು ತಂದಿದ್ದನು.

  ______________________________

- ಬೊಂಬೆಗಳನ್ನು ಯಾವುದರಿಂದ ತಯಾರಿಸಲಾಗಿದೆ?

  ______________________________

- ಬೊಂಬೆಗಳಲ್ಲಿರುವ ನೀತಿಯನ್ನು ರಾಜಸಭೆಗೆ ಅರ್ಥೈಸಿದವರು ಯಾರು?

  ______________________________

## 12. ಪದಬಂಧ ಪೂರ್ಣಗೊಳಿಸು:

| | | | |
|---|---|---|---|
| X | 1 | 1 | X |
| X | X | 2 | 2 |
| 3 | 3 | X | |
| X | 4 | 4 | X |
| X | X | | X |

**ಎಡದಿಂದ ಬಲಕ್ಕೆ**

1. ಅಂಗಡಿಯಲ್ಲಿ ತಿಂಡಿಕೊಳ್ಳಲು ಬೇಕು.
2. ಪಕ್ಷಿಗಳನ್ನು ಹೀಗೂ ಕರೆಯುತ್ತಾರೆ.
3. ತಿಳುವಳಿಕೆಯ ಅರ್ಥ.
4. ವಿದ್ಯೆಯನ್ನು ಕಲಿಸುವರು.

**ಮೇಲಿನಿಂದ ಕೆಳಗೆ**

1. ದುಃಖದ ವಿರುದ್ಧ ಪದ
2. ನವಿಲಿನ ಪುಕ್ಕ
3. ತುಟಿಯಲ್ಲಿ ಮೂಡುವುದು.
4. ಸಹಿಗೆ ಹೀಗೆನ್ನುವರು.

## 13. ಈ ಮಾತನ್ನು ಯಾರು ಯಾರಿಗೆ ಹೇಳಿದರು:

- ಮಹಾರಾಜ ಈ ಬೊಂಬೆಗಳನ್ನು ತಾವು ಕೊಂಡು ನನ್ನನ್ನು ಕಾಪಾಡಬೇಕು.
  ಯಾರು ಹೇಳಿದರು:– ____________________
  ಯಾರಿಗೆ ಹೇಳಿದರು:– ____________________
- ಬೊಂಬೆಗಳು ಚೆನ್ನಾಗಿವೆ ಇವುಗಳ ಬೆಲೆ ಎಷ್ಟು?
  ಯಾರು ಹೇಳಿದರು:– ____________________
  ಯಾರಿಗೆ ಹೇಳಿದರು:– ____________________
- ದಯವಿಟ್ಟು ರಾಜಸಭೆ ಇದನ್ನು ಅರ್ಥಮಾಡಿಕೊಳ್ಳಬೇಕು.
  ಯಾರು ಹೇಳಿದರು:– ____________________
  ಯಾರಿಗೆ ಹೇಳಿದರು:– ____________________

## 14. ಚಿನ್ನದ ಬೊಂಬೆಗಳು ಪದ್ಯದಲ್ಲಿರುವ ಪಾತ್ರಧಾರಿಗಳನ್ನು ಹೆಸರಿಸು:

## 15. ಪದ್ಯದಲ್ಲಿನ ಹತ್ತು ಒತ್ತಕ್ಷರ ಪದಗಳನ್ನು ಪಟ್ಟಿ ಮಾಡು:

**ಹೆಚ್ಚುವರಿ ಚಟುವಟಿಕೆ:–**

1. ನಿನ್ನ ಅಕ್ಕ/ ಅಣ್ಣ/ ಹಿರಿಯರ ಜೊತೆ ಸೇರಿಕೊಂಡು ಪದ್ಯ ಸಂಭಾಷಣೆ ಮಾಡು.

2. ಪದ್ಯಭಾಗದಲ್ಲಿರುವ ಬೊಂಬೆಗಳ ನೀತಿಯನ್ನು ತಿಳಿಯಿರಿ.

3. ತೆನಾಲಿ ರಾಮನ ಇತರ ಕಥೆಗಳನ್ನು ಓದಿ ತಿಳಿದುಕೊಳ್ಳಿ. 4. ಪಂಚತಂತ್ರದ ಕಥೆಗಳನ್ನು ಓದಿರಿ.

DIET CHIKKAMAGALURU

3ನೇ ತರಗತಿ

ಕನ್ನಡ

## ಶಾಲಾ ಪಾಕ್ಷಿಕ ಪತ್ರಿಕೆ

ಮೈಲಿಗಲ್ಲು–06

ನಿರೀಕ್ಷಿತ ಫಲಗಳು:– ಸಹಪಾಠಿಗಳ ಬರೆವಣಿಗೆ ಓದುವುದು.

**ಸೂಚನೆ :– ಈ ಗದ್ಯವನ್ನು ಮೈಲಿಗಲ್ಲು 6ರ ಮೆಟ್ಟಿಲು ಸಂಖ್ಯೆ 78ರಲ್ಲಿ ನೋಡಿ ಅಭ್ಯಾಸ ಮಾಡುವುದು.**

### 1. ಇವುಗಳನ್ನು ಗುರುತಿಸು:


ಪ್ರಜಾವಾಣಿ

ಸಣ್ಣ ಉದ್ಯಮಕ್ಕೆ ದೊಡ್ಡ ಪರಿಹಾರ

17ರ ಬಳಿಕ ಜಿಮ್, ಹೋಟೆಲ್ ಶುರು?

ಜುಲೈ 30–31ಕ್ಕೆ ಸಿಇಟಿ




| | |
|---|---|
| | |

### 2. ಈ ಶುಭಾಶಯ ಪತ್ರಗಳನ್ನು ಓದು:

ಸವಿಯೋಣ ಬೇವು ಬೆಲ್ಲ
ಮರೆಯೋಣ ನೋವೆಲ್ಲಾ

ಕ್ರಿಸ್‌ಮಸ್ ಹಬ್ಬ
ಮಾಡೋಣ
ಯೇಸುವಿನ ಸಂದೇಶ
ಸಾರೋಣ

ರಂಜಾನ್ ಹಬ್ಬದ
ಶುಭಾಶಯಗಳು

### 3. ಈ ಪದಗಳಿಗೆ ಅರ್ಥವನ್ನು ಗಟ್ಟಿಯಾಗಿ ಓದಿ ಬರೆ:

- ಪ್ರಾರ್ಥನೆ – ದೇವತಾ ಸ್ತುತಿ, ಬಿನ್ನಹ ________________
- ಸ್ವರಚಿತ – ತಾನೇ ಬರೆದಿರುವ ________________
- ಸ್ವಚ್ಛ – ಶುಚಿ ________________
- ವಸತಿ – ಮನೆ, ವಾಸಸ್ಥಳ ________________
- ಲೇಖನ – ಬರಹ, ಬರವಣಿಗೆ ________________
- ಆಯ್ದು – ಆರಿಸಿದ ________________
- ಸೊಗಸು – ಆಕರ್ಷಣೀಯ ________________

4. ಈ ಕೈ ಬರಹಗಳನ್ನು ಗಟ್ಟಿಯಾಗಿ ಓದಿ ಬರೆ:

ಗುರುಗಳು ಮಕ್ಕಳಿಗೆ "ನಿಮಗೆ ತಿಳಿದಿರುವ ಸುಭಾಷಿತ, ಸ್ವರಚಿತ ಕವನ, ಚುಟುಕು, ನಗೆಹನಿ, ಪರಿಸರದ ಚಿತ್ರ, ವಿವಿಧ ಸ್ಥಳಗಳ ವಿಶೇಷತೆಗಳು, ವಿವಿಧ ಸಾಧನೆಗಳನ್ನು ಮಾಡಿದ ಮಹನೀಯರುಗಳ ಬಗ್ಗೆ ಲೇಖನ, ಗಾದೆ ಮಾತುಗಳು, ರೇಖಾಚಿತ್ರಗಳು ಮುಂತಾದವುಗಳನ್ನು ಬರೆಯಲು ಹೇಳಿದರು."

5. ಈ ಕೆಳಗೆ ಕೊಟ್ಟಿರುವ ಪದಗಳನ್ನು ಗಮನಿಸಿ ಓದು ನಂತರ ಪಕ್ಕದಲ್ಲಿ ನೀಡಿರುವ ಗೆರೆಗಳಲ್ಲಿ ಬರೆ:


| | | | |
|---|---|---|---|
| 01 | ದೈನಂದಿನ | – ಪ್ರತಿದಿನ | ______ |
| 02 | ಸಾಪ್ತಾಹಿಕ | – ಏಳು ದಿನಗಳಿಗೊಮ್ಮೆ | ______ |
| 03 | ಪಾಕ್ಷಿಕ | – ಹದಿನೈದು ದಿನಗಳಿಗೊಮ್ಮೆ | ______ |
| 04 | ಮಾಸಿಕ | – ತಿಂಗಳಿಗೊಮ್ಮೆ | ______ |
| 05 | ತ್ರೈಮಾಸಿಕ | – ಮೂರು ತಿಂಗಳಿಗೊಮ್ಮೆ | ______ |
| 06 | ಅರ್ಧವಾರ್ಷಿಕ | – ಆರು ತಿಂಗಳಿಗೊಮ್ಮೆ | ______ |
| 07 | ವಾರ್ಷಿಕ | – ಹನ್ನೆರಡು ತಿಂಗಳಿಗೊಮ್ಮೆ | ______ |

6. ಕೊಟ್ಟಿರುವ ಪದಗಳನ್ನು ಓದಿ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ:

ಮಾದರಿ:– ಲೇಖನ:– ಪತ್ರಿಕೆಗೆ ಲೇಖನ ಬರೆಯುತ್ತೇನೆ.

- ಸಂಗ್ರಹ:–
- ಸ್ವಚ್ಛ:–
- ಸೊಗಸು:–
- ಪಾಕ್ಷಿಕ:–

7. ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬರೆ.



| ಅಮ್ಮ | ಹುಡುಗಿ | ಅಜ್ಜ | ಅಕ್ಕ | ಗೆಳೆಯ | ಶಿಕ್ಷಕಿ | ತಮ್ಮ |
|---|---|---|---|---|---|---|
| ಅಪ್ಪ | ______ | ______ | ______ | ______ | ______ | ______ |

8. ಮಾದರಿಯಂತೆ ಗೆರೆ ಎಳೆದಿರುವ ಪದದ ವ್ಯತ್ಯಾಸವನ್ನು ಗಮನಿಸಿ, ಅದರಂತೆ ನಿನ್ನ ಸ್ನೇಹಿತರ ಹೆಸರು ಬಳಸಿ ವಾಕ್ಯ ರಚಿಸು:

ಮಾದರಿ:– * ಸೋನು ತಿಂಡಿ <u>ತಿನ್ನುವಳು.</u>


* ಸೋನು ತಿಂಡಿ <u>ತಿಂದಳು.</u>
* ಸೋನು ತಿಂಡಿ <u>ತಿನ್ನುತ್ತಾಳೆ.</u>

1. ______________________
2. ______________________
3. ______________________

1. ______________________
2. ______________________
3. ______________________

9. ಕೊಟ್ಟಿರುವ ವಾಕ್ಯವನ್ನು ಓದಿ ಪದ ಗೋಪುರವನ್ನು ಪೂರ್ಣಗೊಳಿಸು:

1. ಊಟ ಮಾಡಲು ಬಳಸುವ ಅಂಗ
2. ಕಾರಿನ ಚಕ್ರ
3. ನಮ್ಮ ಭಾಷೆ.
4. ಬೆಳಕಿನ ಹಬ್ಬ
5. ಆರು ತಿಂಗಳಿಗೊಮ್ಮೆ



DIET CHIKKAMA

10. ಪದವನ್ನು ಸರಿಪಡಿಸಿ ಓದಿ ಬರೆ:

ಮಾದರಿ:– (ಸು) (ಸೊ) (ಗ) : <u>ಸೊಗಸು</u>


✥ (ರ) (ಕ್ಷ) (ಅ) ______________

✥ (ನಿ) (ದೈ) (ಕ) ______________

✥ (ಖ) (ಲೇ) (ನ) ______________

✥ (ಬ) (ಹ) (ರ) ______________

**11. ಕೆಳಗೆ ಕೈ ಬರಹ ವಾಕ್ಯ ಮತ್ತು ಮುದ್ರಣ ವಾಕ್ಯ ನೀಡಲಾಗಿದೆ ಅವುಗಳನ್ನು ಗಮನವಿಟ್ಟು ನೋಡು ಆಕಾರ, ಗಾತ್ರದಲ್ಲಿರುವ ವ್ಯತ್ಯಾಸವನ್ನು ಗಮನಿಸು ಕೊನೆಯ ಸಾಲಿನಲ್ಲಿ ವ್ಯತ್ಯಾಸವಿರುವ ಅಕ್ಷರಗಳನ್ನು ಆರಿಸಿ ಬರೆ:**


ಅ) ನಮ್ಮ ನಾಡಹಬ್ಬ ದಸರ.
ಆ) ಓದಿನ ಹಿರಿಮೆಯೇ ಭಾರತದ ಗರಿಮೆ
ಇ) ರಾಗಿಣಿ ಪುಸ್ತಕ ಓದುತ್ತಿದ್ದಾಳೆ.

ಅ. ನಮ್ಮ ನಾಡಹಬ್ಬ ದಸರ
ಆ. ಓದಿನ ಹಿರಿಮೆಯೇ ಭಾರತದ ಗರಿಮೆ.
ಇ. ರಾಗಿಣಿ ಪುಸ್ತಕ ಓದುತ್ತಿದ್ದಾಳೆ.

ಅ. ______________________________
ಆ. ______________________________
ಇ. ______________________________

**12. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ:**

ಅ. ಪಾಕ್ಷಿಕ ಪತ್ರಿಕೆಯ ಹೆಸರೇನು?

ಉತ್ತರ:– ______________________________

ಆ. ಮಕ್ಕಳು ಬರೆದ ಲೇಖನಗಳನ್ನು ಯಾರು ಪರಿಶೀಲಿಸಿದರು?

ಉತ್ತರ:– ______________________________

ಇ. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಕವಿಗಳನ್ನು ಹೆಸರಿಸು?

ಉತ್ತರ:– ______________________________

ಈ. ಶಾಲೆಯ ಪಾಕ್ಷಿಕ ಪತ್ರಿಕೆಯಲ್ಲಿರುವ ಲೇಖನಗಳು ಯಾವುವು?

ಉತ್ತರ:– ______________________________

**13. ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ:**

- ದಸರೆಯ ಮುಖ್ಯ ಆಕರ್ಷಣೆ __________
- ಕೃಷ್ಣರಾಜ ಸಾಗರ ಅಣೆಕಟ್ಟನ್ನು __________ ನದಿಗೆ ಕಟ್ಟಲಾಗಿದೆ.
- ವಿಶ್ವ ಪರಿಸರ ದಿನಾಚರಣೆಯನ್ನು __________ ರಂದು ಆಚರಿಸುತ್ತಾರೆ.
- ನಾಡಹಬ್ಬದ ಬಗ್ಗೆ ಲೇಖನ ಬರೆದವರು. __________
- ಶ್ರೀರಂಗ ಪಟ್ಟಣ __________ ಜಿಲ್ಲೆಯಲ್ಲಿದೆ.
- ಪ್ರತಿದಿನ ಪ್ರಕಟವಾಗುವ ಪತ್ರಿಕೆಯನ್ನು __________ ಎಂದು ಕರೆಯುತ್ತಾರೆ.

**ಜೂನ್–05, ದಸರಾ, ಕಾವೇರಿ, ಮಂಡ್ಯ, ದೈನಿಕ, ಸುಹಾಸ್**

DIET CHIKKAMAGALURU

### 14. ಈ ಗಾದೆ ಮಾತನ್ನು ಪೂರ್ಣಗೊಳಿಸು:

- ಮಾತು ಬೆಳ್ಳಿ ______________________
- ಕುಂಬಾರನಿಗೆ ವರುಷ ______________________
- ಅಂಗೈ ಹುಣ್ಣಿಗೆ ______________________
- ಊರಿಗೆ ಅರಸನಾದರೂ ______________________
- ದನಕಪ್ಪಾದರೆ. ______________________

ಕನ್ನಡಿ ಬೇಕೆ?


ಮೌನ ಬಂಗಾರ

ಹಾಲು ಕಪ್ಪೇ?

ತಾಯಿಗೆ ಮಗ

ದೊಣ್ಣೆಗೆ ನಿಮಿಷ

### 15. ನಿನ್ನ ಕುಟುಂಬದವರ ಸಹಾಯದಿಂದ ಪಾಕ್ಷಿಕ ಪತ್ರಿಕೆ ತಯಾರಿಸು:




**ಹೆಚ್ಚುವರಿ ಚಟುವಟಿಕೆ:**

1. ಕಾರಂಜಿ ಪಾಕ್ಷಿಕ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಬಗ್ಗೆ ನಿನ್ನ ತಂದೆ ತಾಯಿಗೆ ಹೇಳು.
2. ಅಭ್ಯಾಸ ಪುಸ್ತಕದಲ್ಲಿರುವ ಪಠ್ಯಭಾಗವನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಓದು.
3. ನಿಮ್ಮ ಜಿಲ್ಲೆಯಲ್ಲಿರುವ ಪ್ರೇರಣೀಯ ಸ್ಥಳಗಳನ್ನು ಹಿರಿಯರಿಂದ ಕೇಳಿ ತಿಳಿದುಕೊ.
4. ನಿನ್ನ ಮತ್ತು ನಿನ್ನ ತಂದೆ ತಾಯಿಯ ಅಕ್ಷರದಲ್ಲಿನ ಆಕಾರ, ಗಾತ್ರದಲ್ಲಿರುವ ವ್ಯತ್ಯಾಸವನ್ನು ಗಮನಿಸು.
5. ಹಿರಿಯರ ಸಹಾಯದಿಂದ ರಜಾ ಅರ್ಜಿ ಬರೆ.
6. ಅಭ್ಯಾಸ ಪುಸ್ತಕದಲ್ಲಿರುವ ಪ್ರಶ್ನೆಗಳಿಗೆ ಉತ್ತರ ಬರೆ.